ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್‌ನಂತರದ ವಸತಿನಿಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಯಮಗಳನ್ನು ಪರಿಷ್ಕರಿಸುವ ಬಗ್ಗೆ — ಆದೇಶ.

— — —

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಸಕಇ 100 ಬಿಎಂಎಸ್ 86, ದಿನಾಂಕ: 20-6-86.
2) ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಇವರ ಪತ್ರ ಸಂಖ್ಯೆ: ಹಿಂವನಿ:ವನಿಶಾ-2:ವಿನಿ:11:2000-01, ದಿನಾಂಕ: 28-4-2001.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಪ್ರವೇಶ ನಿಯಮಗಳನ್ನು ರಚಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಇವರು ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ 209 ಮೆಟ್ರಿಕ್‌ನಂತರದ ವಸತಿನಿಲಯಗಳನ್ನು ನಡೆಸುತ್ತಿದ್ದು, ಈ ವಸತಿನಿಲಯಗಳ ಪ್ರವೇಶಕ್ಕೆ ನಿಯಮಾವಳಿಗಳನ್ನು ರಚಿಸಿ 14 ವರ್ಷಗಳು ಕಳೆದಿರುವುದರಿಂದ ವಸತಿನಿಲಯಗಳ ಸಮರ್ಪಕ ನಿರ್ವಹಣೆ ದೃಷ್ಟಿಯಿಂದ ಉಲ್ಲೇಖ (1)ರ ಆದೇಶದಲ್ಲಿನ ನಿಯಮಗಳನ್ನು ರದ್ದುಪಡಿಸಿ ಹೊಸ ನಿಯಮಗಳನ್ನು ಜಾರಿಗೆ ತರುವುದು ಅವಶ್ಯಕತೆ ಇರುತ್ತದೆ ಎಂದು ತಿಳಿಸುತ್ತಾ, ಅದರಂತೆ ಕರಡು ಪ್ರವೇಶ ನಿಯಮಾವಳಿಗಳನ್ನು ಸಲ್ಲಿಸುತ್ತಾ ಆಗಸ್ಟನಲ್ಲಿ ಕಾಲೇಜುಗಳು ಪ್ರಾರಂಭವಾಗುವುದರಿಂದ ಪರಿಷ್ಕೃತ ಪ್ರವೇಶ ನಿಯಮಾವಳಿಗಳನ್ನು ಜಾರಿಗೆ ತರುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 190 ಬಿಎಂಎಸ್ 2001, ಬೆಂಗಳೂರು, ದಿನಾಂಕ: 12-6-2001.

ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್‌ನಂತರದ ವಸತಿನಿಲಯಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಸಕಇ 100 ಬಿಎಂಎಸ್ 86, ದಿನಾಂಕ: 20-6-8ರಲ್ಲಿ ಹೊರಡಿಸಲಾಗಿದ್ದ ಆದೇಶವನ್ನು ರದ್ದುಪಡಿಸಲಾಗಿದೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್‌ನಂತರದ ವಸತಿನಿಲಯಗಳಿಗೆ ಪರಿಷ್ಕೃತ ಪ್ರವೇಶ ನಿಯಮಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಸರ್ಕಾರದ ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಪಿ.ಮಂಜುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ಸಮಾಜ ಕಲ್ಯಾಣ ಇಲಾಖೆ.

ಗೆ :

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಕರ್ನಾಟಕ, ಬೆಂಗಳೂರು, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಪ್ರಕಟಿಸಿದ 300 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

ಇವರಿಗೆ :

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು.
4) ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು.
5) ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್.
6) ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿಗಳು.
7) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8) ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು.
9) ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

## ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್-ನಂತರದ ವಸತಿ ನಿಲಯಗಳಿಗೆ ವಿದ್ಯಾರ್ಥಿಗಳ

## ಪ್ರವೇಶದ ನಿಯಮಗಳು

1) ಈ ನಿಯಮಗಳನ್ನು ಹಿಂದುಳಿದ ವರ್ಗಗಳ ಇಲಾಖೆಯ ಮೆಟ್ರಿಕ್-ನಂತರದ ವಸತಿ ನಿಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶದ ನಿಯಮಗಳು ಎಂದು ಕರೆಯತಕ್ಕದ್ದು.

2) ಈ ನಿಯಮಗಳು ಹಿಂದುಳಿದ ವರ್ಗಗಳ ಇಲಾಖೆ ನಡೆಸುವ ಮೆಟ್ರಿಕ್-ನಂತರದ ವಸತಿ ನಿಲಯಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ 150 ಬಿಸಿಎ 94 ದಿನಾಂಕ: 18-9-94 ರ ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ತಿದ್ದುಪಡಿಗೆ ಒಳಪಟ್ಟ ಹಿಂದುಳಿದ ವರ್ಗಗಳೆಂದು ವರ್ಗೀಕರಿಸಲಾದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತವೆ.

3) ಈ ನಿಯಮಗಳು ಈ ತಕ್ಷಣದಿಂದಲೇ ಜಾರಿಗೆ ಬರುತ್ತವೆ.

4) <u>ಅರ್ಹತೆ</u> :

ಅ) ಮೇಲೆ ಉಲ್ಲೇಖಿಸಿರುವ ಸರ್ಕಾರದ ಆದೇಶದ ಪ್ರಕಾರ ಹಿಂದುಳಿದ ವರ್ಗಗಳಿಗೆ ಸೇರಿದ ಸರ್ಕಾರದಿಂದ ನಡೆಸುತ್ತಿರುವ ಅಥವಾ ಸರ್ಕಾರದಿಂದ ಅಂಗೀಕೃತವಾದ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಅಂದರೆ, ಪಿ.ಯು.ಸಿ. ಪದವಿ ಕೋರ್ಸುಗಳು, ಸ್ನಾತಕೋತ್ತರ, (ಪೋಸ್ಟ್ ಗ್ರಾಜುಯೇಷನ್) ಡಿಪ್ಲೊಮಾ, ಐಟಿಐ, ಟಿ.ಸಿ.ಹೆಚ್, ಬಿ.ಇಡಿ., ಎಂ.ಬಿ.ಬಿ.ಎಸ್., ಬಿ.ಇ., ಬಿ.ವಿ.ಎಸ್.ಸಿ., ಟ್ರೈನಿಂಗ್ ಕೋರ್ಸ್ ಇತ್ಯಾದಿ ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಅರ್ಹರು.

ಆ) ವ್ಯಾಸಂಗ ಮಾಡುತ್ತಿರುವ ಶಿಕ್ಷಣ ಸಂಸ್ಥೆಯಿಂದ 5 ಕಿ.ಮೀ. ದೂರದಲ್ಲಿ ವಾಸಿಸುವ ವಿದ್ಯಾರ್ಥಿಯು ಮಾತ್ರ ವಸತಿ ನಿಲಯಕ್ಕೆ ಪ್ರವೇಶ ಪಡೆಯಲು ಅರ್ಹರು. ಯಾವುದೇ ಕಾರಣಕ್ಕೂ ಸ್ಥಳೀಯ ವಿದ್ಯಾರ್ಥಿಗಳು ವಸತಿನಿಲಯದ ಪ್ರವೇಶ ಪಡೆಯಲು ಅನರ್ಹರಾಗಿರುತ್ತಾರೆ. ನಗರ ಮತ್ತು ಪಟ್ಟಣ ಪ್ರದೇಶ, ಮುನಿಸಿಪಲ್ ಕಾರ್ಪೋರೇಷನ್ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು.

ಇ) ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ರೂ.15000-00 ಮತ್ತು ಪ್ರವರ್ಗ-1, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯ ರೂ.50,920-00 ಇದ್ದಲ್ಲಿ ಮಾತ್ರ ಪ್ರವೇಶಕ್ಕೆ ಅರ್ಹರು.

ಈ) ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು. ನವೀಕರಣದ (ಎಟಿಕೆಟಿ) ಪ್ರವರ್ಗ-1, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಿದ್ದಲ್ಲಿ ವಸತಿನಿಲಯಕ್ಕೆ ಪ್ರವೇಶ ಪಡೆಯಲು ಅರ್ಹರು.

5) <u>ಅರ್ಜಿ ಸಲ್ಲಿಸುವ ವಿಧಾನ</u> :

ಅ) ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು, ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಬರುವ ವಸತಿ ನಿಲಯಗಳ ಪ್ರವೇಶ ಕುರಿತಂತೆ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗುವ ಒಂದು ತಿಂಗಳ ಮುಂಚೆ ವಸತಿನಿಲಯದಲ್ಲಿ ಲಭ್ಯವಿರುವ ಹಿಂದುಳಿದ ವರ್ಗಗಳ ವರ್ಗವಾರು ಖಾಲಿ ಸ್ಥಾನಗಳ ಸಂಖ್ಯೆಯನ್ನು ಸೂಚಿಸಿ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಬೇಕು.

... 2 ...

ಅರ್ಜಿಗಳು ಆಹ್ವಾನಿಸಬೇಕಾದ ಪ್ರಕಟಣೆಯನ್ನು ವಸತಿನಿಲಯವು ನಡೆಯುತ್ತಿರುವ ಗ್ರಾಮ ಪಂಚಾಯತ್ ಕಛೇರಿ, ತಾಲ್ಲೂಕು ಪಂಚಾಯತ್ ಕಛೇರಿ, ತಹಶೀಲ್ದಾರರ ಕಛೇರಿ, ವಸತಿನಿಲಯವು ನಡೆಯುತ್ತಿರುವ ಸ್ಥಳದಲ್ಲಿನ ಎಲ್ಲಾ ಕಾಲೇಜುಗಳಲ್ಲಿ ಪ್ರಕಟಣೆಯನ್ನು ಸೂಚನಾ ಫಲಕಕ್ಕೆ ಪ್ರಕಟಿಸಲು ಕಳುಹಿಸತಕ್ಕದ್ದು. ಸ್ಥಳೀಯ ಪತ್ರಿಕೆಗಳ ಮೂಲಕ, ಆಕಾಶವಾಣಿ ಮುಖಾಂತರ ಸುದ್ದಿಯಾಗಿ ಪ್ರಕಟಿಸಲು ವ್ಯಾಪಕ ಪ್ರಚಾರವನ್ನು ಮಾಡತಕ್ಕದ್ದು. ಕನಿಷ್ಟ ಒಂದು ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಪ್ರಕಟಿಸತಕ್ಕದ್ದು.

ಆ) ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಈ ಕೆಳಕಂಡ ದಾಖಲೆಗಳ ಸಹಿತ ಅನುಬಂಧ 'ಅ' ನಲ್ಲಿ ನಿಗದಿ ಮಾಡಿರುವ ನಮೂನೆಯಲ್ಲಿ ಪ್ರವೇಶದ ಅರ್ಜಿಯನ್ನು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ಅಥವಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

1) ಕಂದಾಯ ಇಲಾಖೆಯ ತಹಶೀಲ್ದಾರರ ಪರಿಶೀಲಿಸಿದ ಜಾತಿ, ಆದಾಯ ದೃಢೀಕರಣ ಪತ್ರ (ವೆರಿಫಿಕೇಶನ್ ಸರ್ಟಿಫಿಕೇಟ್) ನಮೂನೆ–1, 2 ಮತ್ತು 3ರಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ.

2) ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಕಾಲೇಜಿನ ಪ್ರಾಂಶುಪಾಲರಿಂದ ಪ್ರವೇಶ ದೃಢೀಕರಣ ಪತ್ರ. (ಪ್ರವೇಶ ಪಡೆಯುವ ಮುನ್ನ ಅರ್ಜಿ ಹಾಕಿದ್ದಲ್ಲಿ ವಸತಿ ನಿಲಯಕ್ಕೆ ಆಯ್ಕೆಯಾದ ನಂತರ ಪ್ರವೇಶ ದೃಢೀಕರಣ ಪತ್ರವನ್ನು ವಿದ್ಯಾರ್ಥಿಯು ಒದಗಿಸತಕ್ಕದ್ದು).

3) ಗ್ರಾಮ ಪಂಚಾಯತಿ ಕಾರ್ಯದರ್ಶಿಯು ವಾಸವಿರುವ ಬಗ್ಗೆ ಮತ್ತು ವಿದ್ಯಾರ್ಥಿಯ ಸ್ವಂತ ಸ್ಥಳಕ್ಕೂ, ವಸತಿ ನಿಲಯಕ್ಕೂ ಇರುವ ಅಂತರದ ಪ್ರಮಾಣ ಪತ್ರ.

4) ಹಿಂದಿನ ತರಗತಿಯಲ್ಲಿ ಉತ್ತೀರ್ಣರಾದ ಅಂಕಪಟ್ಟಿಯ ದೃಢೀಕೃತ ಪ್ರತಿ ಲಗತ್ತಿಸಬೇಕು.

5) ವಸತಿನಿಲಯಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಅಂತಹ ವಿದ್ಯಾರ್ಥಿವೇತನ ಹೊರತುಪಡಿಸಿ, ಇತರೆ ಯಾವುದೇ ವಿದ್ಯಾರ್ಥಿ ವೇತನಗಳಿಗೆ ಅರ್ಹರಿರುವುದಿಲ್ಲ.

6) <u>ಅವಧಿ</u> :

ಅ) ವಸತಿನಿಲಯದ ಪ್ರವೇಶವು ಶಿಕ್ಷಣದ ಪೂರ್ಣ (ಪ್ರತಿ ವರ್ಷ) ಅವಧಿಗೆ ಇರುತ್ತದೆ. ಆದರೂ ಸಹಾ ಪ್ರತಿ ವಿದ್ಯಾರ್ಥಿಯು ಹಿಂದಿನ ತರಗತಿಯಲ್ಲಿ ಉತ್ತೀರ್ಣರಾದ ಬಗ್ಗೆ ದಾಖಲೆ ಸಹಿತವಾಗಿ ಪುನರ್ ಪ್ರವೇಶದ ಅರ್ಜಿಯನ್ನು ಜಿಲ್ಲಾ ಅಧಿಕಾರಿಗಳಿಗೆ ಅಥವಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿವರ್ಷವೂ ಸಲ್ಲಿಸತಕ್ಕದ್ದು. ಸದರಿ ಅರ್ಜಿಯನ್ನು ಕಳೆದ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಯು ಕುಳಿತಿದ್ದ ಫಲಿತಾಂಶ ಹೊರಬಿದ್ದ ಕೂಡಲೇ ಸಲ್ಲಿಸತಕ್ಕದ್ದು. ಅನುತ್ತೀರ್ಣರಾದ 2ಎ, 2ಬಿ, 3ಎ 3ಬಿ ಇವರು ನವೀಕರಣಕ್ಕೆ ಅರ್ಹರಿರುವುದಿಲ್ಲ.

ಆ) ವಾರ್ಡನ್ ರವರ ಪೂರ್ವಾನುಮತಿ ಇಲ್ಲದೆ ಸಮಂಜಸ ಕಾರಣ ಇಲ್ಲದೆ, ಗೈರು ಹಾಜರಾಗಿರುವ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಬಯಸಿದಲ್ಲಿ ಅವರನ್ನು ಹೊಸ ಅರ್ಜಿದಾರರು ಎಂದು ಪರಿಗಣಿಸತಕ್ಕದ್ದು.

ಇ) ನವೀಕರಣದ ವಿದ್ಯಾರ್ಥಿಗಳೆಂದು ಪರಿಗಣಿಸುವಾಗ ಆಯಾ ಕೋರ್ಸ್‌ಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. (ಪದವಿಪೂರ್ವ ಶಿಕ್ಷಣ ಒಂದು ಕೋರ್ಸ್, ಮೆಡಿಕಲ್ ಒಂದು ಕೋರ್ಸ್, ಇಂಜಿನಿಯರಿಂಗ್ ಒಂದು ಕೋರ್ಸ್, ಪದವಿ ಶಿಕ್ಷಣವನ್ನು ಒಂದು ಕೋರ್ಸ್ ಇತ್ಯಾದಿಯಾಗಿ ಕೋರ್ಸುಗಳ ಅವಧಿಯನ್ನು ಪರಿಗಣಿಸತಕ್ಕದ್ದು.

3...

ಈ) ಒಂದೇ ಬಗೆಯ ಸಮಾನ ಶಿಕ್ಷಣ ಪಡೆಯಬಯಸುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಕ್ಕೆ ಅವಕಾಶವಿರುವುದಿಲ್ಲ. (ಉದಾ: ಬಿಕಾಂ ನಂತರ ಬಿ.ಎ. ಬಿ.ಎಡ್. ನಂತರ ಬಿ.ಪಿ.ಎಡ್. ಇತ್ಯಾದಿ).

7) <u>ಶಿಸ್ತು</u> :

ಅ) ವಸತಿ ನಿಲಯಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಶೈಕ್ಷಣಿಕ ಸಂಸ್ಥೆಗಳಲ್ಲಿ ಅವರು ತೆಗೆದುಕೊಂಡ ಶಿಕ್ಷಣವನ್ನು ಪೂರ್ಣಗೊಳಿಸಬೇಕು. ವಸತಿನಿಲಯಕ್ಕೆ ಪ್ರವೇಶ ಪಡೆದ ನಂತರ ವಾರ್ಡನ್ ರವರ ಪೂರ್ವಾನುಮತಿ ಇಲ್ಲದೆ ಸತತವಾಗಿ ಒಂದು ತಿಂಗಳಿಗೂ ಮೇಲ್ಪಟ್ಟು ಅನಧಿಕೃತವಾಗಿ ಗೈರು ಹಾಜರು ಆಗುವ ವಿದ್ಯಾರ್ಥಿಗಳನ್ನು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು:ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳ ಅನುಮತಿ ಪಡೆದು ವಾರ್ಡನ್‌ರವರು ವಿದ್ಯಾರ್ಥಿಗಳನ್ನು ತೆಗೆದು ಹಾಕತಕ್ಕದ್ದು.

ಆ) ವಸತಿನಿಲಯಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ವಸತಿನಿಲಯದ ಒಳಗೆ ಅಥವಾ ಹೊರಗೆ ಶಿಸ್ತನ್ನು ಪಾಲಿಸತಕ್ಕದ್ದು. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ರಾಜಕೀಯ ಚಟು-ವಟಿಕೆಗಳಲ್ಲಿ ಭಾಗವಹಿಸಬಾರದು. ಪದೇ ಪದೇ ಗಲಭೆ ನಡೆಸುವ ಸ್ವಭಾವವುಳ್ಳ ವಿದ್ಯಾರ್ಥಿ-ಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು ಅಥವಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ವಿದ್ಯಾರ್ಥಿಗಳಿಗೆ ನೋಟೀಸನ್ನು ಕೊಟ್ಟು ವಿವರಣೆ ಪಡೆದು, ಸಮಂಜಸವಾಗಿ ವಿವರಣೆ ಇಲ್ಲದೆ ಇದ್ದಲ್ಲಿ ವಸತಿನಿಲಯದಿಂದ ತೆಗೆದುಹಾಕತಕ್ಕದ್ದು.

ಇ) ವಸತಿನಿಲಯಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕಾಲೇಜಿನ ಹಾಜರಾತಿ ಪ್ರತಿ ಮಾಹೆ ಕನಿಷ್ಟ ಶೇಕಡಾ 75ರಷ್ಟು ಇರಬೇಕು. (ವೈದ್ಯಕೀಯ ಕಾರಣಗಳನ್ನು ಹೊರತು-ಪಡಿಸಿ) ಸತತವಾಗಿ 3 ತಿಂಗಳು ಕಾಲೇಜಿನಲ್ಲಿ ಶೇಕಡಾ 75ರಷ್ಟಕ್ಕಿಂತ ಹಾಜರಾತಿ ಕಡಿಮೆ ಇದ್ದಲ್ಲಿ ವಿದ್ಯಾರ್ಥಿಯನ್ನು ವಸತಿನಿಲಯದ ಜಿಲ್ಲಾಧಿಕಾರಿಗಳು ಅಥವಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳವರು ತೆಗೆದುಹಾಕತಕ್ಕದ್ದು.

8) ಪ್ರವೇಶ ಪಡೆದ ವಿದ್ಯಾರ್ಥಿಗಳು ರೂ.200.00 ಅಥವಾ ಸರ್ಕಾರ ಕಾಲಕಾಲಕ್ಕೆ ನಿಗದಿ ಮಾಡಿದ (ಎಚ್ಚರಿಕೆ ಹಣ) ಮೊತ್ತವನ್ನು ಕಟ್ಟತಕ್ಕದ್ದು. ಈ ಹಣದಲ್ಲಿ ವಿದ್ಯಾರ್ಥಿಗಳಿಂದ ವಸತಿ ನಿಲಯಗಳ ವಸ್ತುಗಳು ಬಾಕಿ ಇದ್ದಲ್ಲಿ, ಅದನ್ನು ತೆಗೆದುಕೊಂಡು ಉಳಿಕೆ ಹಣವನ್ನು ಅವರು ವಸತಿ ನಿಲಯ ಬಿಡುವಾಗ ಹಿಂತಿರುಗಿಸತಕ್ಕದ್ದು.

9) ಸರ್ಕಾರಿ ಆದೇಶ ಸಂಖ್ಯೆ: ಸಕಇ 247 ಬಿಎಂಎಸ್ 2000, ದಿನಾಂಕ: 5-9-2000ರಲ್ಲಿ ಹಾಗೂ ಕಾಲಕಾಲಕ್ಕೆ ಸರ್ಕಾರದ ತಿದ್ದುಪಡಿ ಮಾಡಿದಂತೆ ವಸತಿನಿಲಯದ ಆಯ್ಕೆ ಸಮಿ-ತಿಯು ವಸತಿನಿಲಯಗಳಿಗೆ ವಿದ್ಯಾರ್ಥಿಗಳನ್ನು ಆಯಾ ವರ್ಷದ ಜುಲೈ ತಿಂಗಳ ಅಂತ್ಯ-ದೊಳಗೆ ಆಯ್ಕೆ ಮಾಡತಕ್ಕದ್ದು. ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ವಸತಿ ನಿಲಯದ ಮಂಜೂರಾದ ಸಂಖ್ಯೆಯಲ್ಲಿ ಶೇಕಡ 50ರಷ್ಟು ಸಾಮಾನ್ಯ ಕೋರ್ಸುಗಳಿಗೆ ಉಳಿಕೆ ಶೇಕಡಾ 50ರಷ್ಟು ವೃತ್ತಿಪರ ಕೋರ್ಸುಗಳಾದ ಬಿ.ಇ., ಎಂ.ಬಿ.ಬಿ.ಎಸ್., ಐಟಿಐ, ಡಿಪ್ಲೊಮಾ, ಟಿ.ಸಿ.ಹೆಚ್., ಬಿ.ಇ.ಡಿ., ಇತ್ಯಾದಿ ಕೋರ್ಸುಗಳಿಗೆ ಪ್ರವೇಶ ಕೊಡತಕ್ಕದ್ದು. ಕಾಲೇಜುಗಳಲ್ಲಿ ಪ್ರವೇಶ ಮುಕ್ತಾಯವಾಗುವವರೆಗೂ ವೃತ್ತಿಪರ ಕೋರ್ಸುಗಳ ಶೇಕಡಾ 50ರಷ್ಟು ಸ್ಥಾನಗಳನ್ನು ಹಾಗೆಯೇ ಕಾಯ್ದಿರಿಸತಕ್ಕದ್ದು. ವಸತಿನಿಲಯ ನಡೆಯುತ್ತಿರುವ ಸ್ಥಳದಲ್ಲಿ ವೃತ್ತಿಪರ ಕೋರ್ಸುಗಳು ಇಲ್ಲದಿದ್ದಲ್ಲಿ, ವೃತ್ತಿಪರ ಕೋರ್ಸುಗಳ ಅರ್ಜಿಗಳು ಇಲ್ಲದಿದ್ದಲ್ಲಿ, ಸಾಮಾನ್ಯ ಕೋರ್ಸುಗಳ ಅರ್ಜಿಗಳನ್ನು ಪರಿಗಣಿಸತಕ್ಕದ್ದು.

...4...

10) ವಸತಿನಿಲಯಗಳ ಪ್ರವೇಶಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಸಕಇ 79 ಬಿಎಂಎಸ್ 95, ದಿನಾಂಕ: 30-8-95ರಲ್ಲಿ ನಿಗದಿಪಡಿಸಿದಂತೆ ಪ್ರವರ್ಗ-1 ಕ್ಕೆ, ಶೇಕಡ 10, ಪ್ರವರ್ಗ-2ಎ ಶೇಕಡಾ 35, ಪ್ರವರ್ಗ-2ಬಿ ಶೇಕಡಾ 9, ಪ್ರವರ್ಗ 3ಎ ಶೇಕಡಾ 9, ಪ್ರವರ್ಗ-3ಬಿ, ಶೇಕಡಾ 12 ರಷ್ಟು, ಎಸ್.ಸಿ -21, ಎಸ್.ಟಿ. ಶೇಕಡಾ 4 ರಷ್ಟು ಸ್ಥಾನಗಳನ್ನು ಮೀಸಲಿರಿಸತಕ್ಕದ್ದು. ಇವುಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ, ಜೀತ ಪದ್ಧತಿಯಿಂದ ವಿಮುಕ್ತರಾದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡತಕ್ಕದ್ದು. ವಿದ್ಯಾರ್ಥಿಗಳ ಪ್ರವೇಶಕ್ಕೆ ಅರ್ಹತೆ ಆಧಾರವಾಗಿರತಕ್ಕದ್ದು. ವಸತಿನಿಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಆಯಾ ವರ್ಷದ ವಸತಿನಿಲಯದ ಮಂಜೂರಾತಿ ಸಂಖ್ಯಾಬಲಕ್ಕೆ ನಿರ್ಬಂಧಗೊಳಿಸತಕ್ಕದ್ದು. ಯಾವುದೇ ವರ್ಗಗಳಿಗೆ ಅಗತ್ಯವಾದ ಅರ್ಜಿಗಳು ಬಾರದೇ ಪ್ರವೇಶ ಸ್ಥಾನಗಳು ಖಾಲಿ ಇದ್ದಲ್ಲಿ ವಾರ್ಡನ್‌ಗಳು ಹಿಂದುಳಿದ ವರ್ಗಗಳ ತನಿಖಾ ಸಹಾಯಕರು, ಸ್ಥಳೀಯ ಕಾಲೇಜುಗಳಿಗೆ ಭೇಟಿ ಕೊಟ್ಟು ವ್ಯಾಪಕ ಪ್ರಚಾರ ನೀಡಿ, ವಸತಿನಿಲಯಗಳಲ್ಲಿ ದೊರಕುವ ಸವಲತ್ತುಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಪಡೆದು ಆಯ್ಕೆ ಸಮಿತಿಯಿಂದ ಅನುಮೋದನೆ ಪಡೆದು ಖಾಲಿ ಇರುವ ವರ್ಗದಲ್ಲಿಯೇ ತುಂಬತಕ್ಕದ್ದು. ಇದಾದ ನಂತರವೂ ಯಾವುದೇ ನಿರ್ದಿಷ್ಟ ವರ್ಗದಲ್ಲಿ ಜಾಗ ಉಳಿದಲ್ಲಿ ಆಯಾ ಜಿಲ್ಲೆಯಲ್ಲಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು, ಮೇಲ್ಕಂಡ ಮೀಸಲಾತಿ ಅನುಸರಿಸಿ ತುಂಬತಕ್ಕದ್ದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮತಿ ಕೊಡುವ ಮುನ್ನ ಪೂರ್ಣವಾಗಿ ಪರಿಶೀಲಿಸಿ ಖಾಲಿ ಇರುವ ವರ್ಗಗಳಲ್ಲಿ ವಿದ್ಯಾರ್ಥಿಗಳು ಸಿಗುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡು ಒಟ್ಟಾರೆ ಹಿಂದುಳಿದ ವರ್ಗಗಳಿಗೆ ಶೇಕಡಾ 75, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಶೇಕಡಾ 25 ಇರುವಂತೆ ಅನುಮೋದನೆ ನೀಡತಕ್ಕದ್ದು.

11) ಕಾಲೇಜುಗಳಲ್ಲಿ ವಿದ್ಯಾರ್ಥಿಗೆ ಪ್ರವೇಶ ದೊರೆತ ನಂತರ ಕಾಲೇಜಿನ ಮುಖ್ಯಸ್ಥರು ನೀಡಿರುವ ಪ್ರವೇಶ ಪ್ರಮಾಣ ಪತ್ರ ಪರಿಶೀಲನೆ ಮಾಡಿ ಖಚಿತವಾದ ನಂತರ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಪರಿಗಣಿಸತಕ್ಕದ್ದು. ಇದರ ಜೊತೆಗೆ ವಿದ್ಯಾರ್ಥಿಗಳ ಅಂಕಪಟ್ಟಿ, ಜಾತಿ ಆದಾಯ ಪತ್ರ, ವಿದ್ಯಾರ್ಥಿಯ ಸ್ವಂತ ಗ್ರಾಮದಿಂದ ವಸತಿನಿಲಯಕ್ಕೆ ಇರುವ ದೂರದ ದೃಢೀಕರಣ ಪತ್ರ ಇವುಗಳನ್ನು ಪ್ರವೇಶದ ವೇಳೆಯಲ್ಲಿ ಪರಿಶೀಲಿಸಿ ದೃಢಪಟ್ಟ ಮೇಲೆ ವಾರ್ಡನ್‌ರವರು ಪ್ರವೇಶವನ್ನು ಕೊಡತಕ್ಕದ್ದು.

12) ಶೈಕ್ಷಣಿಕ ವರ್ಷಕ್ಕೆ ಸಮನಾಗಿ ವಸತಿನಿಲಯಗಳು 10 ತಿಂಗಳು ಮಾತ್ರ ನಡೆಯತಕ್ಕದ್ದು. ಆದರೂ ವಿದ್ಯಾರ್ಥಿಗಳು ಪರೀಕ್ಷೆ ಮುಗಿಯುವವರೆಗೂ ವಿದ್ಯಾರ್ಥಿನಿಲಯದಲ್ಲಿ ಇರಲು ಊಟ ಮತ್ತು ವಸತಿ ಪಡೆಯಲು ಅರ್ಹರು. ಪರೀಕ್ಷೆಗಳು ಮುಗಿದೊಡನೆ ವಿದ್ಯಾರ್ಥಿಗಳು ವಸತಿನಿಲಯವನ್ನು ಖಾಲಿ ಮಾಡತಕ್ಕದ್ದು.

13) ಸುಳ್ಳು ಆದಾಯ, ಜಾತಿ ಪತ್ರ, ಪ್ರಮಾಣ ಪತ್ರಗಳನ್ನು ನೀಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಈ ಕೆಳಕಂಡ ದಂಡನೆಗೆ ಅರ್ಹರು :

ಅ) ಭಾರತ ದಂಡ ಸಂಹಿತೆ (ಐಪಿಸಿ) 177 ಮತ್ತು 181ನೇ ಅನ್ವಯ ಶಿಕ್ಷಾರ್ಹರು.

ಆ) ಸೂಚನೆ ಇಲ್ಲದೆ ವಸತಿನಿಲಯದಿಂದ ಉಚ್ಛಾಟನೆ.

ಇ) ವಸತಿನಿಲಯದಲ್ಲಿ ಇದ್ದು ಅವರಿಗೆ ಖರ್ಚು ಮಾಡಲಾದ ಹಣದ ಮರು ಪಾವತಿ, ಇಂತಹವರ ವಿರುದ್ಧ ಭೂ ಕಂದಾಯ ನಿಯಮಗಳಂತೆ ಜಿಲ್ಲಾಧಿಕಾರಿಗಳು ಅಥವಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಕ್ತ ಕ್ರಮ ವಹಿಸುವುದು.

14) ವಸತಿನಿಲಯದಲ್ಲಿ ಇಲ್ಲದ ವಿದ್ಯಾರ್ಥಿಗಳಿಗೆ ಸುಳ್ಳು ಹಾಜರಾತಿ ಕೊಟ್ಟು ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಳ್ಳುವ ಮೇಲ್ವಿಚಾರಕರು : ವಾರ್ಡನ್‌ರವರು, ತನಿಖಾ ವೇಳೆಯಲ್ಲಿ ಇವುಗಳನ್ನು ಪತ್ತೆ ಹಚ್ಚುವಲ್ಲಿ ವಿಫಲರಾಗುವ ತನಿಖಾ ಸಹಾಯಕರುಗಳ, ಕಾರ್ಯನಿರ್ವಾಹಕ ಅಧಿಕಾರಿಗಳ, ಜಿಲ್ಲಾ ಅಧಿಕಾರಿಗಳ ವಿರುದ್ಧ, ನಿರ್ದೇಶಕರು, ಹಿಂದುಳಿದ ವರ್ಗಗಳ ಇಲಾಖೆ, ಇವರು ಕ್ರಮವನ್ನು ಜರುಗಿಸತಕ್ಕದ್ದು.

<u>ಸಂಖ್ಯೆ: ಸಕಇ 190 ಬಿಸಿಎಸ್ 2001</u>

(ಎಂ.ಸಿ. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ಸಮಾಜ ಕಲ್ಯಾಣ ಇಲಾಖೆ.

116

## ಅನುಬಂಧ - ಅ

### ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಕೋರಿ ಸಲ್ಲಿಸುವ ಅರ್ಜಿ

ನವೀಕರಣ : ಹೊಸದು

1) ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು
ಅಲ್ಪ ಸಂಖ್ಯಾತರ ಅಧಿಕಾರಿಗಳು
ಜಿಲ್ಲೆ.

2) ಕಾರ್ಯ ನಿರ್ವಾಹಕ ಅಧಿಕಾರಿಗಳು,
ತಾಲ್ಲೂಕು ಪಂಚಾಯತ್,
ತಾಲ್ಲೂಕು.

ಮಾನ್ಯರೆ,

ತಮ್ಮ ಪ್ರಕಟಣೆಯ ಸಂಖ್ಯೆ ------------ ದಿನಾಂಕ ------- ಪ್ರಕಾರ --------------- ಸ್ಥಳದಲ್ಲಿ ನಡೆಯುತ್ತಿರುವ ಮೆಟ್ರಿಕ್ ನಂತರದ ಬಾಲಕ: ಬಾಲಕಿಯರ ವಸತಿ ನಿಲಯಕ್ಕೆ ಪ್ರವೇಶ ಕೋರಿ ಈ ಮೂಲಕ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ. ನನ್ನ ವಿವರಗಳು ಈ ಕೆಳಕಂಡಂತೆ ಇದೆ.

1) ವಿದ್ಯಾರ್ಥಿ ಹೆಸರು (ದಪ್ಪ ಅಕ್ಷರಗಳಲ್ಲಿ) :

2) ವಿದ್ಯಾರ್ಥಿಯ ಪೂರ್ಣ ವಿಳಾಸ :

3) ತಂದೆ: ತಾಯಿ: ಪೋಷಕರ ಹೆಸರು ಮತ್ತು ವಿಳಾಸ :

4) ಹುಟ್ಟಿದ ಸ್ಥಳ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ :

5) ಹುಟ್ಟಿದ ದಿನಾಂಕ ಮತ್ತು ವಯಸ್ಸು :

6) ವ್ಯಾಸಂಗ ಮಾಡುತ್ತಿರುವ ಕಾಲೇಜಿನ ಹೆಸರು ಮತ್ತು ಪೂರ್ಣ ವಿಳಾಸ :

7) ಹಿಂದಿನ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದ ತರಗತಿ: ಮತ್ತು ಗಳಿಸಿದ ಶೇಕಡವಾರು ಅಂಕಗಳು (ಅಂಕ ಪಟ್ಟಿಯ ಪ್ರತಿಯನ್ನು ಲಗತ್ತಿಸಿರಬೇಕು)

8) ಪ್ರಸಕ್ತ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ತರಗತಿ :

....2)

9) ನೀವು ಯಾವ ವರ್ಗಕ್ಕೆ ಮತ್ತು ಜಾತಿಗೆ ಸೇರಿರುವಿರಿ, ತಿಳಿಸಿ, (ವರ್ಗ-1, 2ಎ, 2ಬಿ, 3ಎ, 3ಬಿ, ಎಸ್.ಸಿ ಮತ್ತು ಎಸ್.ಟಿ.) (ತಹಶೀಲ್ದಾರರವರು, ಉಪ ತಹಶೀಲ್ದಾರರು ಕೊಡುವ ಜಾತಿ ಮತ್ತು ಆದಾಯದ ಪರಿಶೀಲನಾ ಪತ್ರದ ಪ್ರತಿಯನ್ನು ಲಗತ್ತಿಸಬೇಕು)

10) ತಂದೆ:ತಾಯಿ, ಪೋಷಕರ ಕುಟುಂಬದ ವಾರ್ಷಿಕ ವರಮಾನ ಎಲ್ಲಾ ಮೂಲಗಳಿಂದ :

11) ಕಾಲೇಜಿಗೂ ಮತ್ತು ವಿದ್ಯಾರ್ಥಿಯ ಸ್ವಂತ ಸ್ಥಳಕ್ಕೂ ಇರುವ ಅಂತರ (ದೂರ) ಗ್ರಾಮ ಪಂಚಾಯತ್ ಕಾರ್ಯದರ್ಶಿಯಿಂದ ಪಡೆದ ಅಂತರದ ಸರ್ಟಿಫಿಕೇಟನ್ನು ಲಗತ್ತಿಸಬೇಕು. :

12) ಅರ್ಜಿಯು ಹೊಸ ಪ್ರವೇಶಕ್ಕೋ ಅಥವಾ ನವೀಕರಣಕ್ಕೋ :

ಈ ಮೇಲೆ ಕೊಟ್ಟಿರುವ ಮಾಹಿತಿಯು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆ. ಒಂದು ವೇಳೆ ಕೊಟ್ಟ ಮಾಹಿತಿಯು ಸುಳ್ಳಾಗಿದ್ದಲ್ಲಿ ನನಗೆ ಖರ್ಚು ಮಾಡುವ ಹಣವನ್ನು ಸರ್ಕಾರವು ನನ್ನಿಂದ ವಸೂಲಿ ಮಾಡಬಹುದು.

ವಿದ್ಯಾರ್ಥಿಯ ತಂದೆ:ತಾಯಿ:ಪೋಷಕರ ಹೆಸರು

ದಿನಾಂಕ:

ಸ್ಥಳ:

ವಿದ್ಯಾರ್ಥಿಯ ಹೆಸರು

ದಿನಾಂಕ:

ಸ್ಥಳ:

## ಕಾಲೇಜಿನ ದೃಢೀಕರಣ ಪತ್ರ

ಶ್ರೀ ------------------------ ಇವರು ನಮ್ಮ ಕಾಲೇಜಿನಲ್ಲಿ ------------ ತರಗತಿಯಲ್ಲಿ ---------- ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ; ಇವರ ಗುಣನಡತೆ ತೃಪ್ತಿಕರವಾಗಿದೆ ಎಂಬುದಾಗಿ ದೃಢೀಕರಿಸಿರುತ್ತೇನೆ.

ದಿನಾಂಕ:

ಪ್ರಾಂಶುಪಾಲರ ಸಹಿ ಮತ್ತು ಸೀಲು

ಸ್ಥಳ:

ಎಂ.